ವಿವರ	ಸರಕುಗಳ ಸಂಖ್ಯೆ	ಲಕ್ಷ ರೂ. ಗಳಲ್ಲಿ		
		೧೯೮೭–೮೮	೧೯೮೮–೮೯	೧೯೮೯–೯೦
೧ ಇಂಧನ	೨	೭೪೩೦.೧೫	೭೮೦೦.೧೨	೭೯೨೨.೮೬
೨ ಮೈದುಜಾಲಕ ಎಣ್ಣೆ ಮತ್ತು ಗ್ರೀಸ್	೮	೫೦೨.೬೩	೫೩೪.೮೫	೫೮೧.೦೪
೩ ಟೈರ್, ಟ್ಯೂಬ್ ಮತ್ತು ಫ್ಲಾಪ್‌ಗಳು	೧೪	೨೫೭೭.೭೫	೨೮೬೮.೬೬	೨೭೨೬.೬೦
೪ ಬ್ಯಾಟರಿಗಳು	೨	೧೦೩.೦೭	೧೧೫.೬೮	೧೪೩.೧೮
೫ ಬಿಡಿಬಾಗಗಳು ಮತ್ತು ಜೋಡಣೆಗಳು	೨೦೦೦	೧೧೦೫.೪೧	೧೫೪೯.೨೭	೧೬೪೪.೪೫
೬ ಇತರ ಬಳಕೆ ವಸ್ತುಗಳು	೩೦೦	೧೦೬೪.೨೬	೧೨೯೩.೧೮	೧೨೧೨.೦೦
೭ ಟಿಕೇಟ್ ಲೇಹನ ಸಾಮಗ್ರಿ ಮತ್ತು ಸಮವಸ್ತ್ರಗಳು	೧೭	೧೭೬.೫೫	೪೨೬.೭೦	೨೪೧.೫೮

ಅ) ಕ.ರಾ.ರ.ಸಾ. ಸಂಸ್ಥೆಯು ಸುಮಾರು ೨೫೦೦ ಸರಕುಗಳನ್ನು ಪ್ರತಿ ವರ್ಷ ಖರೀದಿಸಂತ್ತದೆ. ಇವುಗಳನ್ನು ದರಸಂವಿದೆ ಉದ್ದಿಮೆಗಳು, ಮೂಲಕ ಉತ್ಪಾದಕರು, ಸಣ್ಣ ಪ್ರಮಾಣದ ಉದ್ದಿಮೆದಾರರಿಂದ ಪೂರಕ ಉದ್ದಿಮೆಗಳಿಂದ ಖರೀದಿಸುತ್ತೇವೆ.

ಇ) ಎಲ್ಲಾ ಖರೀದಿಯನ್ನು ಆಂಗೀಕರಿಸಿದ ಮೂಲಗಳಿಂದ ಸಮಿತಿಯು ಅನುಮತಿ ನೀಡಿದ ನಂತರವೇ ಖರೀದಿಸಲಾಗುತ್ತದೆ. ಆದರೆ ಕೆಲವೊಂದು ಸಮಯದಲ್ಲಿ ತಕ್ಷಣ ಬೇಕಾಗುವ ಅಗತ್ಯ ಬಿಡಿಭಾಗಗಳನ್ನು ವಿಭಾಗಗಳಿಂದ ಖರೀದಿಸಲಾಗುವುದು. ಈ ಸಂದರ್ಭದಲ್ಲಿಯೂ ಸಹ ಕೇಂದ್ರ ಕಛೇರಿಯಿಂದ ಹೊರಡಿಸಲಾದ ಸೂಚನೆಯನ್ನು ಅನುಸರಿಸಲಾಗುವುದು.

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಟೆಂಡರ್ ಮತ್ತು ಹರಾಜಿನ ಆಧಾರದ ಮೇಲೆ ಬಂದ ಹಣ ಈ ಕೆಳಗಿನಂತಿದೆ.

ವರ್ಷ	ಮೊಬಲಗು (ರೂ.ಗಳಲ್ಲಿ)
೧೯೮೭–೮೮	೩,೭೮,೫೯,೭೪೪–೫೫
೧೯೮೮–೮೯	೪,೨೫,೦೭,೭೨೫–೦೦
೧೯೮೯–೯೦	೫,೦೯,೩೪,೭೨೪–೦೦

ಸರ್ಕಾರಿ ವಸತಿಗೃಹ ಹಂಚಿಕೆ ರದ್ದುಪಡಿಸುವ ಬಗ್ಗೆ

೧೩೮೫. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಹುತೇಕ ರಾಜ್ಯ ಸರ್ಕಾರಿ ನೌಕರರು ಗೃಹ ನಿರ್ಮಾಣ ಮುಂಗಡ ಪಡೆದು ಮನೆಗಳನ್ನು ಬೆಂಗಳೂರಿನ ಹೊರ ಪ್ರದೇಶದಲ್ಲಿ ಕಟ್ಟಿದ್ದರೂ ಸಹ ಸರ್ಕಾರಿ ವಸತಿ ಗೃಹಗಳಲ್ಲಿ (ಜೀವನಭೀಮಾನಗರ ರಾಜಾಜಿ ನಗರ ಮತ್ತು ವಿಲ್ಸನ್ ಗಾರ್ಡನ್) ಮುಂದುವರಿಯುತ್ತಿದ್ದಾರೆ ಎಂಬುದು ನಿಜವೆ;

ಆ) ಸರ್ಕಾರಿ ವಸತಿಗೃಹ ಹಂಚಿಕೆಯಾಗಿರುವ ಕೆಲವೊಂದು ಸರ್ಕಾರಿ ನೌಕರರು ಗೃಹ ನಿರ್ಮಾಣ ಮುಂಗಡವನ್ನು ಪಡೆದು ಮನೆಗಳನ್ನು ಕಟ್ಟಿ ಬೇರೆಯವರಿಗೆ ಹೆಚ್ಚಿನ ಬಾಡಿಗೆಗೆ ಕೊಟ್ಟು ಸರ್ಕಾರಿ ವಸತಿ ಗೃಹಗಳಲ್ಲಿ ಮುಂದುವರಿಯುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದೇ ;

ಇ) ಹಾಗಿದ್ದಲ್ಲಿ, ಸರ್ಕಾರವು ಅಂಥವರಿಗೆ ಕೊಟ್ಟ ವಸತಿ ಗೃಹಗಳ ಹಂಚಿಕೆಯನ್ನು ರದ್ದುಪಡಿಸಿ ಆಂಧ್ರಪ್ರದೇಶ ಸರ್ಕಾರದಲ್ಲಿರುವಂತೆ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಅರ್ಹರಾದ ಸರ್ಕಾರಿ ನೌಕರರಿಗೆ ಮಾನ್ಯತೆ ಕೊಡುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಸರ್ಕಾರದಿಂದ ಗೃಹ ನಿರ್ಮಾಣಕ್ಕಾಗಿ ಮಂಜೂರಾದ ಹಣ ಪಡೆದು ಬೆಂಗಳೂರು ಮಹಾನಗರ ಪಾಲಿಕೆಯ ಹೊರಗಡೆ ಮನೆಗಳನ್ನು ಕಟ್ಟಿ ಬೇರೆಯವರಿಗೆ ಬಾಡಿಗೆಯನ್ನು ಕೊಟ್ಟಿದ್ದರೂ ಸಹ ಅಂತಹ ಹಂಚಿಕೆಯನ್ನು ಪಡೆದವರು ಸರ್ಕಾರಿ ವಸತಿ ಗೃಹಗಳಲ್ಲಿ ಮುಂದುವರಿಯಲು ನಿಯಮಾನುಸಾರ ಯಾವ ನಿರ್ಬಂಧವೂ ಇಲ್ಲ. ಆದರೆ ಸರ್ಕಾರದಿಂದ ಗೃಹ ನಿರ್ಮಾಣ ಮಂಜೂರಾದ ಹಣ ಪಡೆದು ಬೆಂಗಳೂರು ನಗರದಲ್ಲಿ ಮನೆ ಕಟ್ಟಿಸಿ ಬೇರೆಯವರಿಗೆ ಬಾಡಿಗೆ ಕೊಟ್ಟ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿವೆ. ಒಂದು ಜೀವನಭೀಮಾನಗರ ಮತ್ತೊಂದು ವಿಲ್ಸನ್ ಗಾರ್ಡನ್, ವಸತಿ ಗೃಹ ನಿಯಮಾವಳಿಯ ಪ್ರಕಾರ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ವಸತಿ ಗೃಹ ಹಂಚಿಕೆ ನಿಯಮಾವಳಿಯ ಪ್ರಕಾರ ಅಂಥವರ ಮೇಲೆ ದಂಡ ಬಾಡಿಗೆಯನ್ನು ವಿಧಿಸಿ ಮತ್ತು ವಸತಿಗೃಹದಿಂದ ಖಾಲೀ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಂತರ ಕಾಯ್ದಿರಿಸಿದ ಪಟ್ಟಿಯಲ್ಲಿರುವಂತೆ ಅರ್ಹರಾದ ಸರ್ಕಾರಿ ನೌಕರರಿಗೆ ಜ್ಯೇಷ್ಠತೆಯ ಆಧಾರದ ಮೇಲೆ ವಸತಿ ಗೃಹಗಳನ್ನು ಹಂಚಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಸರ್ಕಾರಿ ನೌಕರರಿಗೆ ವಸತಿ ಗೃಹ ಹಂಚಿಕೆ

೧೩೬೮. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೆಂಗಳೂರು ನಗರದಲ್ಲಿ ಸರ್ಕಾರಿ ನೌಕರರಿಗೆ ಹಂಚಿಕೆಯಾಗಿರುವ ಎಲ್ಲಾ ನಮೂನೆಯ ವಸತಿ ಗೃಹಗಳ ಒಟ್ಟು ಸಂಖ್ಯೆ?

ಆ) ಈ ಸರ್ಕಾರಿ ವಸತಿ ಗೃಹಗಳು ಇರುವ ಸ್ಥಳಗಳಾವವು?

ಇ) ಗೃಹನಿರ್ಮಾಣ ಮಂಜೂರಾದ ಹಣ ಪಡೆದು ಬೆಂಗಳೂರು ನಗರದಲ್ಲಿ ಸ್ವಂತ ಮನೆಗಳನ್ನು ನಿರ್ಮಿಸಿರುವ ಸರ್ಕಾರಿ ನೌಕರರು ಕೂಡಾ ಈ ಸರ್ಕಾರಿ ವಸತಿಗೃಹಗಳಲ್ಲಿ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಸರ್ಕಾರಿ ನೌಕರರನ್ನು ವಸತಿ ಗೃಹಗಳಿಂದ ಖಾಲಿ ಮಾಡಿಸಿ ಅವುಗಳನ್ನು ಮನೆ ಇಲ್ಲದ ಸರ್ಕಾರಿ ನೌಕರರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿಸಚಿವರು).—

ಅ) ಬೆಂಗಳೂರು ನಗರದಲ್ಲಿ ಸರ್ಕಾರಿ ನೌಕರರಿಗೆ ಹಂಚಿಕೆಯಾಗಿರುವ ಎಲ್ಲಾ ನಮೂನೆಯ ವಸತಿ ಗೃಹಗಳ ಸಂಖ್ಯೆ: ೨,೮೪೨

ಆ)

(೧)	ರಾಜಾಜಿ ನಗರ ೬ನೇ ಬ್ಲಾಕ್	–	೨೧೬
(೨)	ಜಯಮಹಲ್	–	೪೭
(೩)	ವಸಂತನಗರ	–	೫೯
(೪)	ಮಾಗಡಿ ರೋಡ್	–	೪೩೨
(೫)	ಪೊಲೀಸರಿಗೆ ಆನಂದರಾವ್ ಸರ್ಕಲ್	–	೩೧೨
(೬)	ಪೊಲೀಸ್ ಬ್ಲಾಕಪಲ್ಲಿ ಶಿವಾಜಿನಗರ	–	೨೫೨
(೭)	ಪೊಲೀಸ್ ಫ್ರೇಜರ್ ಟೌನ್	–	೧೫೦
(೮)	ಪೊಲೀಸ್ ಆರ್.ಕೆ. ಮಟ್ಟ	–	೭೮
(೯)	ಪೊಲೀಸ್ ಕೋರ್ಟ್ಸ್ ರಸ್ತೆ	–	೪೯
(೧೦)	ಪೊಲೀಸ್ ಕಾರ್ಕ್ಸ್‌ಬರ್ಗ್ ರಸ್ತೆ	–	೧
(೧೧)	ಪೊಲೀಸ್ ಬ್ರಾಡ್‌ವೇರಸ್ತೆ	–	೨
(೧೨)	ಪೊಲೀಸ್ ಮತ್ತು ಡಿಸ್‌ಪೆನ್ಸರಿ ರಸ್ತೆ	–	೧